# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೨ ಸೆಪ್ಟೆಂಬರ್, ೨೦೨೫ (ಭಾದ್ರಪದ ೨೧, ಶಕವರ್ಷ ೧೯೪೭)<br>BENGALURU, FRIDAY, 12 SEPTEMBER, 2025 (BHADRAPADA 21, SHAKAVARSHA 1947) | ನಂ. ೫೮೫<br>No.585 |
|---|---|---|


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 56 SHASANA 2025, BENGALURU, DATED:12.09.2025**

The Karnataka Municipalities and Certain other Law (Amendment) Bill, 2025 ಇದಕ್ಕೆ 2025ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 64 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ACT NO. 64 OF 2025

(First published in the Karnataka Gazette Extra-ordinary on the 12th day of September, 2025)

## THE KARNATAKA MUNICIPALITIES AND CERTAIN OTHER LAW (AMENDMENT) ACT, 2025

(Received the assent of the Governor on the 11th day of September, 2025)

An Act further to amend the Karnataka Municipalities Act, 1964 and the Karnataka Municipal Corporations Act, 1976.

Whereas it is expedient further to amend the Karnataka Municipalities Act, 1964 (Karnataka Act 22 of 1964) and the Karnataka Municipal Corporations Act, 1976 (Karnataka Act 14 of 1977) for the purposes hereinafter appearing;

Be it enacted by the Karnataka State Legislature in the seventy sixth year of the Republic of India as follows, namely:-

**1. Short title and Commencement.-**(1) This Act may be called the Karnataka Municipalities and Certain other Law (Amendment) Act, 2025.

(2) It shall come into force at once.

**2. Amendment of Karnataka Act 22 of 1964.-** In the Karnataka Municipalities Act, 1964 (Karnataka Act 22 of 1964),-

(i) in section 2, after clause (9), the following shall be inserted, namely:-

"(9-A) "Empanelled professional" means professionals such as Architects, Engineers, Structural consultants, Mechanical, Electrical and Plumbing (MEP) consultants, town planner, Environment consultants etc., who are empanelled by the Local Authority as authorized persons to inspect the building sites before, during and after construction, as the case may be, to certify the constructions made are as per the provisions of the approved plans and report to the Local Authority and also to sanction building plans, as notified by the Government."

(ii) in section 180,-

(a) in sub-section (1), for the words "municipal council", the words "municipal commissioner or chief officer" , shall be substituted; and

(b) in sub-section (4), for the words "two hundred rupees", the words "two thousand rupees", shall be substituted.

(iii) in section 184,-

(a) in sub-section (1), for the words "municipal council", the words "municipal commissioner or chief officer" , shall be substituted; and

(b) in sub-section (2), for the words "municipal council", the words "municipal commissioner or chief officer" , shall be substituted.

(iv) in section 187,-

(a) for sub-section (1), as the following shall be substituted, namely:-

"(1) Before beginning to construct any building, or to alter externally or add to any existing building, or to construct or reconstruct any projecting portion of a building in respect of which the municipal council is empowered by section 181, the person intending so to construct, alter, add or reconstruct shall apply through a web portal and shall furnish at the same time, a plan showing the levels at which the foundation and lowest floor of such building are proposed to be laid, by reference to some level known to the municipal council and all information required by the bye-laws or demanded by the municipal council regarding the limits, dimension, design, ventilation and materials of the proposed building, and the intended situation and construction of the drains, sewers, privies, water-closets and cess pools, if any, to be used in connection therewith, and the location of the building with reference to any existing or projected streets, and the purpose for which the building will be used to the municipal council including documents related to self-certification of the licensed professionals in case of such buildings as notified by the Government."

(b) after sub-section (1) so substituted, the following shall be inserted, namely: -

"(1-A) Levy of imposts, restrictions and conditions.- (1) The municipal council may, for approving or sanctioning the plan or grant of commencement certificate or occupation certificate, charge and levy the following fee at such rates specified in the rules or bye-laws, based on the guidance value fixed by the department of Stamps and Registration under the provisions of the Karnataka Stamp Act, 1957 (Karnataka Act 34 of 1957) or based on any fixed charges with annual increment, namely: –

(i) fee for issuance of license;
(ii) fee for security of the building for which license granted;
(iii) fee for maintenance of public roads or storing of construction materials in public places during construction viz, ground rent;
(iv) security fee, ensuring that the construction is in accordance with plan sanctioned;
(v) fee for commencement certificate;
(vi) fee for occupancy certificate;
(vii) fee for services rendered by Empanelled Professionals in connection to the Authority's requirements, to be borne by the owners of buildings.
(viii) Penalty imposed at the time of issuance of occupancy certificate for not obtaining commencement certificate at the commencement of the construction;
(ix) penalty for regularization up to the extent of violation or deviation in the construction with respect to sanctioned plan or zonal regulation limit, as specified in the byelaws; and
(x) such other fee as specified in the byelaws or as specified by the Government from time to time"

(v) in section 190, after sub-section (2), the following shall be inserted, namely:-

"(2-A) The Government may notify the category of building which shall be exempted from obtaining occupancy certificate."

(vi) in section 208, in sub-section (1) and sub-section (3), for the words "municipal council", the words "municipal commissioner or chief officer", shall be substituted.

(vii) in section 256,-

(a) for sub-section (1), the following shall be substituted, namely:-

"(1) No person shall use or permit to be used any premises for any of the purposes without or otherwise than in conformity with the terms of a license granted by the Municipal Commissioner or Chief Officer in this behalf, as specified in the bye-laws or as notified by the Government:

Provided that, all Micro, small and Medium Enterprises registered under the Micro, Small and Medium Enterprises Development Act, 2006 (Central Act 27 of

2006) in concerned District Industries Centre and Large Industries who have filed Industrial Entrepreneurs Memorandum or Industrial License with the Secretariat of Industrial Assistance, Department of Industrial Policy and Promotion, Government of India are exempted from obtaining trade license."

(b) in sub-section (2), for the words and figures "mentioned in Part I or II in Schedule XIII", the words "as specified in the bye-laws or as notified by the Government", shall be substituted.

(c) in sub-section (4),-

(i) for the words "under sub-section (1) or sub-section (2)", the words "as specified in the bye-laws or as notified by the Government", shall be substituted; and

(ii) the proviso shall be omitted.

(d) for sub-section (6) the following shall be substituted, namely:–

"(6) Whoever uses any premises in contravention of the provisions of sub-section (1) or (2) or (3) or of any bye-law made under sub-section (1) of section 324 shall be punished with penalty."

(e) in sub-section (7), for the words, figure, letters and brackets "to in clause (a) or (b) of sub-section (1)", the words, figure and brackets "to in sub-section (1)", shall be substituted.

(viii) in section 324, in sub-section (1),-

(a) in clause (cc), after the words and figures "under section 187 are to be prepared" the words "including empanelling various professionals to avail their services to inspect the building sites before, during and after construction and to certify the constructions made are as per the provisions of the approved plans and report to the Local Authority and also sanction building plans of certain buildings as notified by the government and to clearly define their roles, responsibilities, and the penal provisions applicable in cases of violation," shall be inserted.

(b) in clause (z), for the words "municipal council", the words "municipal commissioner or chief officer" shall be substituted

(ix) The Schedule XIII and the entries relating thereto shall be omitted.

**3. Amendment of Karnataka Act 14 of 1977.-** In the Karnataka Municipal Corporations Act, 1976 (Karnataka Act 14 of 1977),-

(i) in section 176, in sub-section (6), in clause (b), in sub-clause (ii) after the words "granted", the words "except with the previous sanction of the Government", shall be inserted.

(ii) in section 310, after sub-section (2), the following shall be inserted, namely:-

"(3) The Government may notify the category of building which shall be exempted from obtaining occupancy certificate."

(iii) in section 353,-

(a) in sub-section (1), for the words and letter "mentioned in Schedule X", the words "as specified in the bye-laws or as notified by the Government" shall be substituted; and

(b) in sub-section (2), for the word and letter "Schedule X", the words "the bye-laws or as notified by the Government", shall be substituted.

(iv) The Schedule X and the entries relating thereto shall be omitted.

**4. Power to remove difficulties.-** (1) If any difficulty arises in giving effect to the provisions of this Act, the Government may by order, published in the official Gazette, as the occasion may require, do anything which appears to it to be necessary to remove the difficulty.

(2) Every order made under this section shall, as soon as may be after it is so made, be laid before the House of State Legislature.

By Order and in the name of
the Governor of Karnataka,

**G. Sridhar**
Secretary to Government
Department of Parliamentary Affairs
and Legislation

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ
## ಸಂಖ್ಯೆ: ಸಂವ್ಯಶಾಇ 56 ಶಾಸನ 2025, ಬೆಂಗಳೂರು, ದಿನಾಂಕ:12.09.2025

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022 (2023 ರ ಕರ್ನಾಟಕ ಅಧಿನಿಯಮ 13)ರ ಪ್ರಕರಣ 6ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Municipalities and Certain other Law (Amendment) Act, 2025 (Karnataka Act 64 of 2025)ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

### 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 64

(2025 ರ ಸೆಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

### ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2025

(2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.-** ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರಲ್ಲಿ,-

(i) 2ನೇ ಪ್ರಕರಣದ (9)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“(9ಎ) “ಪಟ್ಟಿ ಮಾಡಲಾದ ವೃತ್ತಿಪರರು” ಎಂದರೆ, ವೃತ್ತಿಪರರಾದ ವಾಸ್ತುಶಿಲ್ಪಿಗಳು, ಇಂಜಿನಿಯರುಗಳು, ರಚನಾ ವಿನ್ಯಾಸ ಸಮಾಲೋಚಕರು, ಯಾಂತ್ರಿಕ, ವಿದ್ಯುನ್ಮಾನ ಮತ್ತು ಕೊಳಾಯಿ ಸಂಬಂಧಿ (ಎಂಇಪಿ) ಸಲಹೆಗಾರರು, ಪಟ್ಟಣ ಯೋಜಕರು, ಪರಿಸರ ಸಮಾಲೋಚಕರು ಮುಂತಾದವರು ಸಂದರ್ಭಾನುಸಾರ ಕಟ್ಟಡ ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಪರಿಶೀಲಿಸಲು, ಅನುಮೋದಿತ ಯೋಜನೆಗಳ ಉಪಬಂಧಗಳನುಸಾರ ಮಾಡಲಾದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಹಾಗೂ

ಸರ್ಕಾರವು ಅಧಿಸೂಚಿಸಿದಂತೆ ಕೆಲವು ಕಟ್ಟಡಗಳ ಕಟ್ಟಡ ನಕ್ಷೆಗಳನ್ನು ಮಂಜೂರು ಮಾಡಲು ಸಹ ಸ್ಥಳೀಯ ಪ್ರಾಧಿಕಾರದಿಂದ ಅಧಿಕೃತಗೊಳಿಸಿದ ವ್ಯಕ್ತಿಗಳು ಎಂಬುದಾಗಿ ಪಟ್ಟಿ ಮಾಡಲಾದವರು".

(ii) ಪ್ರಕರಣ 180ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಮುನ್ಸಿಪಲ್ ಕೌನ್ಸಿಲ್‌ನ" ಎಂಬ ಪದಗಳ ಬದಲಿಗೆ "ಮುನಿಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಪ್ರಕರಣ (4)ರಲ್ಲಿ "ಎರಡು ನೂರು ರೂಪಾಯಿಗಳವರೆಗೆ" ಎಂಬ ಪದಗಳ ಬದಲಿಗೆ "ಎರಡು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) ಪ್ರಕರಣ 184ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಮುನ್ಸಿಪಲ್ ಕೌನ್ಸಿಲ್‌ನಿಂದ" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಪ್ರಕರಣ (2)ರಲ್ಲಿ "ಮುನ್ಸಿಪಲ್ ಕೌನ್ಸಿಲ್" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) ಪ್ರಕರಣ 187ರಲ್ಲಿ,-

(ಎ) ಉಪ-ಪ್ರಕರಣ (1)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಯಾವುದೇ ಕಟ್ಟಡವನ್ನು ನಿರ್ಮಿಸುವ ಅಥವಾ ಈಗಿರುವ ಯಾವುದೇ ಕಟ್ಟಡಕ್ಕೆ ಹೊರಗೆ ಮಾರ್ಪಾಟು ಮಾಡುವ ಅಥವಾ ಅದಕ್ಕೆ ಸೇರಿಸುವ ಅಥವಾ ಯಾವ ಕಟ್ಟಡವನ್ನು ತೆಗೆದುಹಾಕಲು ಅಥವಾ ಯಾವ ಕಟ್ಟಡದ ನಿರ್ಮಾಣವನ್ನು ಹಿಂದಕ್ಕೆ ಸರಿಸಲು ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಕಟ್ಟಡದ ಯಾವುದೇ ಮುಂಚಾಚಿರುವ ಭಾಗವನ್ನು ಅಥವಾ ಯಾವ ಕಟ್ಟಡದ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲ್‌ಗೆ 181ನೇ ಪ್ರಕರಣದ ಮೂಲಕ ಅಧಿಕಾರ ನೀಡಲಾಗಿದೆಯೋ ಆ ಕಟ್ಟಡವನ್ನು ನಿರ್ಮಿಸುವುದಕ್ಕೂ ಮೊದಲು ಅಥವಾ ಪುನರ್ ನಿರ್ಮಿಸುವುದನ್ನು ಪ್ರಾರಂಭಿಸುವುದಕ್ಕೂ ಮೊದಲು, ಹಾಗೆ ನಿರ್ಮಿಸಲು, ಮಾರ್ಪಾಟು ಮಾಡಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಉದ್ದೇಶಿಸುವ ವ್ಯಕ್ತಿಯು, ವೆಬ್ ಪೋರ್ಟಲ್ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅದೇ ಸಮಯದಲ್ಲಿ ಅಂಥ ಕಟ್ಟಡದ ತಳಪಾಯವನ್ನು ಮತ್ತು ಅತಿ ಕೆಳಗಿನ ನೆಲ ಅಂತಸ್ತಿನ ಮಟ್ಟಗಳನ್ನು, ಮುನ್ಸಿಪಲ್ ಕೌನ್ಸಿಲ್‌ಗೆ ತಿಳಿದಿರುವ ಯಾವುದೇ ಮಟ್ಟವನ್ನು ತಿಳಿಸಿ ಯಾವ ಮಟ್ಟಗಳಲ್ಲಿ ನಿರ್ಮಿಸಲು ಪ್ರಸ್ತಾವಿಸಲಾಗಿದೆಯೋ ಆ ಮಟ್ಟಗಳನ್ನು ತೋರಿಸುವ ನಕ್ಷೆಯನ್ನು, ಮತ್ತು ಪ್ರಸ್ತಾವಿತ ಕಟ್ಟಡದ ಪರಿಮಿತಿಗಳು, ಉದ್ದಗಲ, ವಿನ್ಯಾಸ, ವಾಯು ಸಂಚಾರ, ಸಾಮಗ್ರಿಗಳ ಬಗ್ಗೆ ಬೈಲಾಗಳಲ್ಲಿ ಅಗತ್ಯಪಡಿಸಿದ ಅಥವಾ ಮುನ್ಸಿಪಲ್ ಕೌನ್ಸಿಲ್ ತಗಾದೆ ಮಾಡಿದ ಎಲ್ಲಾ ಮಾಹಿತಿಯನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಬಳಸಬೇಕಾದ ಚರಂಡಿಗಳು, ಗ್ರಾಮಸಾರ ಚರಂಡಿಗಳು, ಕಕ್ಕಸುಗಳು, ಶೌಚಗೃಹಗಳು ಮತ್ತು ರೊಚ್ಚುಗುಂಡಿಗಳು ಯಾವುದಾದರೂ ಇದ್ದರೆ ಅವುಗಳ ಉದ್ದೇಶಿತ ಸ್ಥಳ ಮತ್ತು ನಿರ್ಮಾಣದ ಬಗ್ಗೆ ಯಾವುದೇ ಈಗಿರುವ ಅಥವಾ ಯೋಜಿತ ಬೀದಿಗಳಿಗೆ ಸಂಬಂಧಪಟ್ಟಂತೆ ಕಟ್ಟಡದ ಸ್ಥಳವನ್ನು ಹಾಗೂ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಬಳಸಬೇಕಾಗಿದೆಯೋ ಆ ಉದ್ದೇಶದ ಬಗ್ಗೆ ಸರ್ಕಾರವು ಅಧಿಸೂಚಿಸಿದಂಥ ಕಟ್ಟಡಗಳ ಸಂದರ್ಭದಲ್ಲಿ ಲೈಸೆನ್ಸುಳ್ಳ ವೃತ್ತಿಪರರ ಸ್ವ-ಪ್ರಮಾಣೀಕರಣಕ್ಕೆ (self-certification) ಸಂಬಂಧಿಸಿದ ದಸ್ತಾವೇಜಿಗಳನ್ನು ಒಳಗೊಂಡು ಎಲ್ಲ ಮಾಹಿತಿಯನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಒದಗಿಸತಕ್ಕದ್ದು."

(ಬಿ) ಹಾಗೇ ಪ್ರತಿಯೋಜಿಸಲಾದ ಉಪ-ಪ್ರಕರಣ (1)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**(1-ಎ). ಕರಗಳು, ನಿರ್ಬಂಧಗಳು ಮತ್ತು ಷರತ್ತುಗಳ ವಿಧಿಸುವಿಕೆ.-** (1) ಮುನ್ಸಿಪಲ್ ಕೌನ್ಸಿಲ್ ನಕ್ಷೆಯನ್ನು ಅನುಮೋದಿಸಲು ಅಥವಾ ಮಂಜೂರು ಮಾಡಲು ಅಥವಾ ಪ್ರಾರಂಭ ಪ್ರಮಾಣಪತ್ರ ಅಥವಾ ಅಧಿಭೋಗ ಪ್ರಮಾಣಪತ್ರವನ್ನು ನೀಡಲು, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ರ ಉಪಬಂಧಗಳ ಅಡಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಅಥವಾ ವಾರ್ಷಿಕ ಹೆಚ್ಚಳದೊಂದಿಗಿನ ಯಾವುದೇ ನಿಗದಿತ ದರಗಳ ಆಧಾರದ ಮೇಲೆ ನಿಯಮಗಳು ಅಥವಾ ಉಪವಿಧಿಗಳಲ್ಲಿ ನಿಯಮಿಸಬಹುದಾದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ.-

(i) ಲೈಸೆನ್ಸು ನೀಡಿಕೆಗಾಗಿ ಶುಲ್ಕ;

(ii) ಲೈಸೆನ್ಸು ಮಂಜೂರು ಮಾಡಲಾದ ಕಟ್ಟಡಕ್ಕಾಗಿ ಭದ್ರತಾ ಶುಲ್ಕ;

(iii) ನಿರ್ಮಾಣದ ಸಮಯದಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳ ಶೇಖರಣೆಗಾಗಿ ಶುಲ್ಕ, ಅಂದರೆ ನೆಲ ಬಾಡಿಗೆ;

(iv) ನಿರ್ಮಾಣವು ಮಂಜೂರಾದ ಯೋಜನೆಯ ಅನುಸಾರವಾಗಿರುವುದನ್ನು ಖಚಿತಪಡಿಸಲು ಭದ್ರತಾ ಶುಲ್ಕ;

(v) ಪ್ರಾರಂಭ ಪ್ರಮಾಣಪತ್ರಕ್ಕಾಗಿ ಶುಲ್ಕ;

(vi) ಅಧಿಭೋಗ ಪ್ರಮಾಣಪತ್ರಕ್ಕಾಗಿ ಶುಲ್ಕ;

(vii) ಪ್ರಾಧಿಕಾರದ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಪಟ್ಟಿ ಮಾಡಲಾದ ವೃತ್ತಿಪರರು ಒದಗಿಸುವ ಸೇವೆಗಳಿಗಾಗಿ ಕಟ್ಟಡಗಳ ಮಾಲೀಕರು ಭರಿಸಬೇಕಾದ ಶುಲ್ಕ.

(viii) ನಿರ್ಮಾಣದ ಪ್ರಾರಂಭದಲ್ಲಿ ಪ್ರಾರಂಭ ಪ್ರಮಾಣ ಪತ್ರವನ್ನು ಪಡೆಯದಿದ್ದಕ್ಕಾಗಿ ಅಧಿಭೋಗ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ವಿಧಿಸುವ ದಂಡ.

(ix) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮಂಜೂರಾದ ನಕ್ಷೆ ಅಥವಾ ವಲಯ ನಿಯಂತ್ರಣ ಮಿತಿಗೆ ಸಂಬಂಧಿಸಿದಂತೆ ನಿರ್ಮಾಣದಲ್ಲಿನ ಉಲ್ಲಂಘನೆ ಅಥವಾ ಮಾರ್ಗ ಪಲ್ಲಟದ ವ್ಯಾಪ್ತಿಯವರೆಗೆ ಕ್ರಮಬದ್ಧಗೊಳಿಸುವುದಕ್ಕಾಗಿ ದಂಡ; ಮತ್ತು

(x) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಇತರ ಶುಲ್ಕ."

(v) ಪ್ರಕರಣ 190ರಲ್ಲಿ, ಉಪ-ಪ್ರಕರಣ (2)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2ಎ) ಅದಿಭೋಗ ಪ್ರಮಾಣ ಪತ್ರವನ್ನು ಪಡೆಯುವುದರಿಂದ ವಿನಾಯಿತಿಸಬೇಕಾದ ಕಟ್ಟಡಗಳ ಪ್ರವರ್ಗವನ್ನು ಸರ್ಕಾರವು ಅಧಿಸೂಚಿಸಬಹುದು."

(vi) ಪ್ರಕರಣ 208ರಲ್ಲಿನ ಉಪ-ಪ್ರಕರಣ (1) ಮತ್ತು ಉಪ-ಪ್ರಕರಣ (3)ರಲ್ಲಿ, "ಮುನ್ಸಿಪಲ್ ಕೌನ್ಸಿಲ್" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(vii) ಪ್ರಕರಣ 256ರಲ್ಲಿ,-

(ಎ) ಉಪ-ಪ್ರಕರಣ (1)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು ಈ ಕುರಿತು ಮಂಜೂರು ಮಾಡಿದ ಲೈಸೆನ್ಸಿನ

ನಿಬಂಧನೆಗಳನ್ನು ಅನುಸರಿಸದೆ ಅಥವಾ ಅನ್ಯಥಾ ಯಾವುದೇ ಉದ್ದೇಶಗಳಿಗಾಗಿ ಯಾವುದೇ ಆವರಣಗಳನ್ನು ಯಾರೇ ವ್ಯಕ್ತಿಯು ಬಳಸತಕ್ಕದ್ದಲ್ಲ ಅಥವಾ ಬಳಸಲು ಅನುಮತಿಸತಕ್ಕದ್ದಲ್ಲ:

ಪರಂತು, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಅಧಿನಿಯಮ, 2006 (2006ರ ಕೇಂದ್ರ ಅಧಿನಿಯಮ 27)ರಡಿಯಲ್ಲಿ ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೋಂದಾಯಿಸಿರುವ ಎಲ್ಲಾ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ಕೈಗಾರಿಕಾ ಸಹಾಯ ಸಚಿವಾಲಯ, ಕೈಗಾರಿಕಾ ನೀತಿ ಮತ್ತು ಪ್ರಚಾರ ಇಲಾಖೆ, ಭಾರತ ಸರ್ಕಾರ ಇದರೊಂದಿಗೆ ಕೈಗಾರಿಕಾ ಉದ್ಯಮಿಗಳ ಜ್ಞಾಪಕ ಪತ್ರ ಅಥವಾ ಕೈಗಾರಿಕಾ ಲೈಸೆನ್ಸನ್ನು ದಾಖಲಿಸಿರುವ ದೊಡ್ಡ ಕೈಗಾರಿಕೆಗಳಿಗೆ ವ್ಯಾಪಾರ ಲೈಸೆನ್ಸನ್ನು ಪಡೆಯುವುದರಿಂದ ವಿನಾಯಿತಿ ನೀಡಲಾಗುತ್ತದೆ."

(ಬಿ) ಉಪ-ಪ್ರಕರಣ (2)ರಲ್ಲಿ "XIIIನೇ ಅನುಸೂಚಿಯ Iನೇ ಹಾಗೂ IIನೇ ಭಾಗದಲ್ಲಿ ನಮೂದಿಸಿರುವ" ಎಂಬ ಅಕ್ಷರಗಳು ಮತ್ತು ಪದಗಳ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) ಉಪ-ಪ್ರಕರಣ (4)ರಲ್ಲಿ,-

(i) "(1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ" ಎಂಬ ಪದಗಳ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ಡಿ) ಉಪ-ಪ್ರಕರಣ (6)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(6) ಉಪ-ಪ್ರಕರಣ (1), ಅಥವಾ (2) ಅಥವಾ (3)ರ ಅಥವಾ 324ನೇ ಪ್ರಕರಣದ ಉಪ-ಪ್ರಕರಣ (1)ರಡಿ ರಚಿಸಲಾದ ಯಾವುದೇ ಬೈಲಾದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಆವರಣಗಳನ್ನು ಬಳಸಿದ ಯಾರಾದರೂ ದಂಡದೊಂದಿಗೆ ದಂಡಿತನಾಗತಕ್ಕದ್ದು."

(ಇ) ಉಪ-ಪ್ರಕರಣ (7)ರಲ್ಲಿ "ಉಪ-ಪ್ರಕರಣ (1)ರ (ಎ) ಅಥವಾ (ಬಿ) ಖಂಡದಲ್ಲಿ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ಬದಲಿಗೆ "ಉಪ-ಪ್ರಕರಣ (1)ರಲ್ಲಿ" ಎಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

(viii) ಪ್ರಕರಣ 324ರ ಉಪ-ಪ್ರಕರಣ (1)ರಲ್ಲಿ,-

(ಎ) ಖಂಡ (ಸಿಸಿ)ಯಲ್ಲಿ "187ನೇ ಪ್ರಕರಣದ ಮೇರೆಗೆ" ಎಂಬ ಪದಗಳ ಬದಲಾಗಿ "ಅನುಮೋದಿತ ಯೋಜನೆಗಳ ಉಪಬಂಧಗಳ ಪ್ರಕಾರ ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಮತ್ತು ಸರ್ಕಾರವು ನಿಯಮಿಸಿದಂತೆ ಕೆಲವು ಕಟ್ಟಡಗಳ ಕಟ್ಟಡ ನಕ್ಷೆಗಳನ್ನು ಮಂಜೂರು ಮಾಡಲು ಮತ್ತು ಅವರ ಪಾತ್ರಗಳು, ಜವಾಬ್ದಾರಿಗಳು ಮತ್ತು ಉಲ್ಲಂಘನೆಯ ಪ್ರಕರಣಗಳಲ್ಲಿ ಅನ್ವಯವಾಗುವ ದಂಡದ ನಿಬಂಧನೆಗಳನ್ನು ಸ್ಪಷ್ಟವಾಗಿ ಪರಿಭಾಷಿಸಲು, ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಕಟ್ಟಡ ಸ್ಥಳಗಳನ್ನು ಪರಿಶೀಲಿಸಲು ಮತ್ತು ಮಾಡಿದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ವಿವಿಧ ವೃತ್ತಿಪರರನ್ನು ತಮ್ಮ ಸೇವೆಗಳನ್ನು ಪಡೆಯಲು ಪಟ್ಟಿ ಮಾಡುವುದನ್ನು ಒಳಗೊಂಡಂತೆ " ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಖಂಡ (ಝಡ್)ರಲ್ಲಿ "ಮುನ್ಸಿಪಲ್ ಕೌನ್ಸಿಲ್" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ix) ಅನುಸೂಚಿ XIII ಮತ್ತು ಅದರೊಂದಿಗಿನ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರಲ್ಲಿ,-

(i) ಪ್ರಕರಣ 176ರ ಉಪ-ಪ್ರಕರಣ (6)ರಲ್ಲಿನ (ಬಿ) ಖಂಡದ (ii)ನೇ ಉಪ-ಖಂಡದಲ್ಲಿ "ಯಾವುದೇ ಸ್ಥಿರ ಸ್ವತ್ತನ್ನು " ಎಂಬ ಪದಗಳಿಗೆ ಮೊದಲು "ಸರ್ಕಾರದ ಪೂರ್ವಾನುಮತಿಯ ಹೊರತು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಪ್ರಕರಣ 310ರಲ್ಲಿ ಉಪ-ಪ್ರಕರಣ (2)ರ ತರುವಾಯ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಅದಿಭೋಗ ಪ್ರಮಾಣ ಪತ್ರವನ್ನು ಪಡೆಯುವುದರಿಂದ ವಿನಾಯಿತಿಸಲಾಗುವ ಕಟ್ಟಡಗಳ ಪ್ರವರ್ಗವನ್ನು ಸರ್ಕಾರವು ಅಧಿಸೂಚಿಸಬಹುದು."

(iii) ಪ್ರಕರಣ 353ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಅನುಸೂಚಿ Xರಲ್ಲಿ ನಿರ್ದಿಷ್ಟಪಡಿಸಿದ" ಎಂಬ ಪದಗಳು ಮತ್ತು ಅಕ್ಷರದ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಅಧಿಸೂಚಿಸಿದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಪ್ರಕರಣ (2)ರಲ್ಲಿ "ಅನುಸೂಚಿ Xರಲ್ಲಿ" ಎಂಬ ಪದಗಳು ಮತ್ತು ಅಕ್ಷರದ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಅಧಿಸೂಚಿಸಿದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) ಅನುಸೂಚಿ X ಮತ್ತು ಅದರೊಂದಿಗಿನ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**4. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸುವ ಉದ್ದೇಶಗಳಿಗಾಗಿ ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಉಪಬಂಧಗಳನ್ನು ರಚಿಸಬಹುದು:

(2) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

The above translation of the Karnataka Municipalities and Certain other Law (Amendment) Act, 2025 (Karnataka Act 64 of 2025) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH